(೧೧) ಚಿಕ್ಕನಾಯಕನಹಳ್ಳಿ ತಾಲ್ಲೂಕು ಗೌಡಸಾಗರ ಗ್ರಾಮದ ಶ್ರೀ ಕರಿಯಮ್ಮ ದೇವರ ದೇವಸ್ಥಾನದ ಕಟ್ಟಡಕ್ಕೆ ಹಣ ಮಂಜೂರು ಮಾಡುವ ಬಗ್ಗೆ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರ ೧೯೮೫–೮೬ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಗೌಡಸಾಗರ ಗ್ರಾಮದ ಶ್ರೀ ಕರಿಯಮ್ಮ ದೇವರ ದೇವಸ್ಥಾನದ ಕಟ್ಟಡಕ್ಕಾಗಿ ಗ್ರಾಮಸ್ಥರ ಮನವಿಯ ಮೇರೆಗೆ ರಾಜ್ಯದ ಮುಜರಾಯಿ ಫಂಡಿನಿಂದ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿಕೊಟ್ಟಿರುತ್ತದೆ. ಆದರೆ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಇದುವರೆಗೆ ಸದರಿ ಹಣವನ್ನು ಬಿಡುಗಡೆ ಮಾಡಿಕೊಟ್ಟಿರುವುದಿಲ್ಲ. ಈ ದೇವರ ಭಕ್ತಾದಿಗಳು ಬಂದು ರಿಜಿಸ್ಟರ್ಡ್ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯನ್ನು ಮಾಡಿಕೊಂಡಿದ್ದು ಈಗಾಗಲೇ ಈ ದೇವಸ್ಥಾನದ ಕಟ್ಟಡಕ್ಕೆ ಎಂಭತ್ತೈದು ಸಾವಿರ ರೂಪಾಯಿಯಷ್ಟು ಹಣ ಖರ್ಚು ಮಾಡಿ ಮುಕ್ಕಾಲು ಭಾಗ ದೇವಸ್ಥಾನದ ಕಟ್ಟಡವನ್ನು ಕಟ್ಟಿರುತ್ತಾರೆ. ನಾನು ಸಹ ಆ ಗ್ರಾಮಕ್ಕೆ ಭೇಟಿ ಕೊಟ್ಟಾಗ ಈ ಸಂಗತಿಯನ್ನು ಕಣ್ಣಾರೆ ಕಂಡಿರುತ್ತೇನೆ. ಆದ್ದರಿಂದ ಸರಕಾರ ಮಂಜೂರು ಮಾಡಿರುವ ಹಣವನ್ನು ಬಿಡುಗಡೆ ಮಾಡಿಕೊಟ್ಟು ದೇವಸ್ಥಾನದ ಕಟ್ಟಡಕ್ಕೆ ಸಹಾಯ ಮಾಡಬೇಕಾಗಿ ಸಂಬಂಧಪಟ್ಟ ಸಚಿವರನ್ನು ಕೇಳಿಕೊಳ್ಳುತ್ತೇನೆ.

೨.೦೦ ಪಿ.ಎಂ.

ಶ್ರೀ ಜಿ. ಬಸವಣ್ಣಪ್ಪ.—ಈ ವಿಚಾರವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳುತ್ತೇನೆ.

(೧೨) ಗುಳೇದಗುಡ್ಡ ಪೇಟೆಗೆ ಕುಡಿಯಂವ ನೀರಿನ ಯೋಜನೆ

ಶ್ರೀ ಎಸ್.ಜಿ. ನಂಜಯ್ಯಮಠ (ಗುಳೇದಗುಡ್ಡ).—ಮಾನ್ಯ ಅಧ್ಯಕ್ಷರೇ, ಗುಳೇದಗುಡ್ಡ ನಗರವು ೪೦,೦೦೦ ಜನಸಂಖ್ಯೆಯನ್ನು ಹೊಂದಿದ್ದು ಆ ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಮಬಪ್ರಭಾ ನದಿ ಬತ್ತಿದುದರಿಂದ ಜನರಿಗೆ ಕುಡಿಯಲು ನೀರು ಇಲ್ಲದಂತಾಗಿದೆ. ಎಂಟು ದಿನಗಳಿಂದ ಜನರು ಕುಡಿಯನವ ನೀರಿಲ್ಲದೆ ಕಷ್ಟದಲ್ಲಿದ್ದಾರೆ. ನವಿಲುತೀರ್ಥ ಯೋಜನೆಯಿಂದ ೨೦೦ ಕ್ಯೂಸೆಕ್ಸ್ ನೀರು ಬಿಡಲು ಕೂಡಲೇ ಲೋಕೋಪಯೋಗಿ ಮಂತ್ರಿಗಳು ಸಂಬಂಧಪಟ್ಟ ನವಿಲುತೀರ್ಥ ಯೋಜನೆಯ ಮುಖ್ಯ ಅಭಿಯಂತರಿಗೆ ಆದೇಶ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ನಂಜಯ್ಯಮಠರವರು ಕೇಳಿದ ಪ್ರಶ್ನೆಗೆ ಮಾನ್ಯ ಹೆಚ್‌ಯುಡಿ ಮಂತ್ರಿಗಳ ಗಮನಕ್ಕೆ ಇದನ್ನು ತಂದು ಸೂಕ್ತ ಸುಮಜಾಯಿಷಿಯನ್ನು ಈ ಅಧಿವೇಶನದಲ್ಲಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ನಂಜಯ್ಯನಮಠ.—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇಲ್ಲೇ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಮಂತ್ರಿಗಳು ಸುಮ್ಮನೆ ಇದ್ದಾರೆ, ಇನ್ನೊಬರು ಎದ್ದರು.

ಶ್ರೀ ಹೆಚ್. ಡಿ. ದೇವೇಗೌಡ —ವಿಷಯ ನನಗೆ ಗೊತ್ತಾಗಿದೆ. ನಾನು ಸಂಬಂಧಪಟ್ಟವನಲ್ಲ. ಇದು ನೀರು ಬಿಡಿಸುವ ಪ್ರಶ್ನೆ ಇದೆ. ಈ ಟೈಮಿನಲ್ಲಿ ಅಲ್ಲಿ ನೀರಿಲ್ಲ ಏನು ಮಾಡುವುದು.

(೧೩) ಸಂಡೂರು ತಾಲ್ಲೂಕಿನ ತಾರಾನಗರದಲ್ಲಿ ಲಾರಿ ಗುಡಿಸಲಿಗೆ ಡಿಕ್ಕಿ ಹೊಡೆದು ಮೂರು ಜನರು ಸತ್ತಿರುವುದು

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸಂಡೂರು ತಾಲ್ಲೂಕು ತಾರಾನಗರ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ ಲಾರಿಯೊಂದು ಗುಡಿಸಲಿಗೆ ಡಿಕ್ಕಿ ಹೊಡೆದು ಮೂರು ಜನ ಮೃತರಾಗಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ, ಈ ಲಾರಿ ಅಪಘಾತದಲ್ಲಿ ಮೃತ ಪಟ್ಟವರ ಕುಟುಂಬದವರಿಗೆ ಪರಿಹಾರ ಕೊಡುವಂತೆ ಸರಕಾರವನ್ನು ಒತ್ತಾಯಿಸಿ, ಅಪಘಾತದ ವಿವರಗಳನ್ನು ತಿಳಿಯಬಯಸುತ್ತೇನೆ.